**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು. 2**

**(ಇಂದು ದಿನಾಂಕಃ 21-08-2025 ರಂದು ಡಿ.ಡಬ್ಲ್ಯು.2 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಪಾಟೀ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಆರ್ ವಿ ಬಿ ರವರಿಂದಃ**

22. ನೀವು ಈವರೆಗೆ ಎಷ್ಟು ವೀಲುನಾಮೆಗಳನ್ನು ಬರೆದಿದ್ದೀರಿ ಎಂದರೆ ಸಾಕ್ಷಿ ಎಂದರೆ ಇದೊಂದೇ ವೀಲುನಾಮೆ ಬರೆದಿರುವುದು ಅಂತಾ ಉತ್ತರಿಸುತ್ತಾರೆ. ಇದಕ್ಕಿಂತ ಮೊದಲು ನೀವು ಯಾವುದೇ ನ್ಯಾಯಾಲಯದಲ್ಲಿ ವೀಲುನಾಮೆಗೆ ಸಾಕ್ಷಿದಾರರಾಗಿ ಅಥವಾ ಬರಹಗಾರರಾಗಿ ಸಾಕ್ಷ್ಯ ನುಡಿದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ.

23. ಈ ಪ್ರಕರಣದಲ್ಲಿನ ವೀಲುನಾಮೆಯು ಈ ದಾವೆಯ ಪ್ರತಿವಾದಿಯ ಮಾತು ಕೇಳಿ ಅವರೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡ ವೀಲುನಾಮೆ ಎಂದರೆ ಸುಳ್ಳು. ಶ್ರೀಮತಿ ಲಲಿತಾ ವಾಗಳೇಕರರವರು ಮಾನಸಿಕ ಅಸ್ವಸ್ಥರಾಗಿದ್ದು ಯಾವುದೇ ವೀಲುನಾಮೆಯನ್ನು ಬರೆಯುವ ಅಥವಾ ಬರೆದಿಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸುಳ್ಳು. ಸದ್ರಿ ವೀಲುನಾಮೆ ತಯಾರಿಸುವ ಸಮಯದಲ್ಲಿ ನೀವು ಪೋಟೋ ಅಥವಾ ವಿಡಿಯೋ ಚಿತ್ರೀಕರಣ ಮಾಡುವಂತೆ ಸಲಹೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯ ಪರ ಸಾಕ್ಷ್ಯ ನುಡಿಯಲು ಹಣ ಹಾಗೂ ಜಮೀನಿನ ಆಮೀಷವೊಡ್ಡಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಲಲಿತಾ ವಾಗಳೇಕರರವರು ವೀಲುನಾಮೆ ಬರೆದಿಡಬೇಕು ಅಂತಾ ಹೇಳಿರುವ ಸಂಧರ್ಭದಲ್ಲಿ ನೀವೇನಾದರೂ ಟಿಪ್ಪಣಿ ವಗೈರೆಯನ್ನು ಬರೆದಿಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಲಲಿತಾ ವಾಗಳೇಕರರವರು ಯಾವತ್ತು ಸಹ ನಿಮ್ಮ ಬಳಿ ಬಂದು ವೀಲುನಾಮೆ ಬರೆಯುವಂತೆ ಕೋರಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಲಲಿತಾ ವಾಗಳೇಕರರವರ ಹೇಳಿಕೆಯ ಮೇರೆಗೆ ಯಾವುದೇ ವೀಲುನಾಮೆಯನ್ನು ತಯಾರಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗೆ ಶಾಮೀಲಾಗಿ ಒಂದು ಖೊಟ್ಟಿ ದಾಖಲೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ದಾಖಲೆಗೆ ನಾನು ಸಾಕ್ಷಿದಾರನಾಗಿ ಹಾಗೂ ಇನ್ನೊಬ್ಬರು ಸಾಕ್ಷಿದಾರರಾಗಿ ಸಹಿ ಮಾಡಿದ್ದರು ಅಂತಾ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

ಕಾರವಾರ.